

# ಭತ್ತದ ಭಗೀರಥ

**ಬೆಳ್ತಂಗಡಿ ತಾಲ್ಲೂಕಿನ ಮಿತ್ತಬಾಗಿಲಿನ ಬಿ.ಕೆ. ದೇವರಾವ್ ಭತ್ತದ ತಳಿಯ ಪಾಲಿಗೆ ಭಗೀರಥನಿದ್ದಂತೆ. 170 ಭತ್ತದ ತಳಿಗಳನ್ನು ಸಂರಕ್ಷಣೆ ಮಾಡಿರುವ ಅವರಿಗೀಗ, 'ರಾಷ್ಟ್ರೀಯ ಸಸ್ಯ ತಳಿ ಸಂರಕ್ಷಕ' ಪ್ರಶಸ್ತಿಯ ಗೌರವ.**

**■ ಕೋಡಿಬೆಟ್ಟು ರಾಜಲಕ್ಷ್ಮಿ**
ಚಿತ್ರಗಳು: ಅರುಣ್ ಕಿಲ್ಲೂರು

ಅಮೂಲ್ಯವಾದ ವಸ್ತುವೊಂದನ್ನು ಸಂಗ್ರಹಿಸುವುದು ಎಂದರೆ ಅದು ಕಾಲದ ಹೊಡೆತಕ್ಕೆ ಸಿಕ್ಕಿ ಹಾಳಾಗದಂತೆ ಕಾಪಿಟ್ಟುಕೊಳ್ಳುವುದು. ಮುಂದಿನ ಪೀಳಿಗೆಗೆ ದೊರೆಯುವಂತೆ ಮಾಡುವುದು. ಹೀಗೆ ಕಾಪಿಟ್ಟುಕೊಳ್ಳುವ ಪ್ರಕ್ರಿಯೆ ಒಂದೇ ತೆರನಾಗಿರುವುದಿಲ್ಲ. ಅಂಚೆಚೀಟಿ, ಪೆನ್ನು, ಸೀರೆ, ಪಾತ್ರೆಗಳು... ಹೀಗೆ ಒಂದೊಂದು ವಸ್ತುವಿನ ಸಂರಕ್ಷಣೆಗೆ ಅದರದ್ದೇ ಆದ ವಿಧಾನಗಳಿವೆ. ಆದರೆ ಆಹಾರ ಬೆಳೆಗಳ ತಳಿಯನ್ನು ರಕ್ಷಣೆ ಮಾಡುವುದು ಎಂದರೆ, ನಿರಂತರವಾಗಿ ಕೃಷಿ ಮಾಡುತ್ತಲೇ ಇರಬೇಕು. ಬೆಳೆಯಲ್ಲಿ ದೊರೆಯುವ ಉತ್ತಮ ಬೀಜವನ್ನು ಸಂಗ್ರಹಿಸಿಟ್ಟುಕೊಳ್ಳಬೇಕು.

ಸಹ್ಯಾದ್ರಿ ತಪ್ಪಲಿನ ಬೆಳ್ತಂಗಡಿ ತಾಲ್ಲೂಕಿನ ಮಿತ್ತಬಾಗಿಲು ಎಂಬಲ್ಲಿ ಕೃಷಿ ತಪಸ್ವಿಯಂತೆ ವಾಸಿಸುತ್ತಿರುವ ಅಮ್ಮೆ ಬಿ.ಕೆ. ದೇವರಾವ್ ಈ ಕಾಯಕವನ್ನು ಶ್ರದ್ಧೆಯಿಂದ ಬಹುಕಾಲದಿಂದ ನಿರ್ವಹಿಸುತ್ತಿದ್ದಾರೆ. ಅವರ ಈ ಕೃಷಿ ಧ್ಯಾನವನ್ನು ಗೌರವಿಸಿ, 'ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್' ವತಿಯಿಂದ ನೀಡುವ 'ರಾಷ್ಟ್ರೀಯ ಸಸ್ಯ ತಳಿ ಸಂರಕ್ಷಕ' ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇತ್ತೀಚೆಗೆ ಪ್ರದಾನ ಮಾಡಿದರು.

'ಪ್ರಶಸ್ತಿಗಳಿಗೆ ಅರ್ಜಿ ಹಾಕುವುದೆಲ್ಲ ನನಗೆ ಗೊತ್ತಿಲ್ಲ. ಆದರೆ ಪ್ರಶಸ್ತಿ ಬಂದಾಗ ಬಹಳ ಖುಷಿಯಾಗಿದೆ. ಯಾಕೆಂದರೆ ನಾನು ಪ್ರೀತಿಸುವ ಭತ್ತಕ್ಕೆ ಈ ಪ್ರಶಸ್ತಿ ಬಂದಿದೆಯಲ್ಲ' ಎಂದು ಹೇಳುತ್ತ ದೇವರಾವ್ 'ಸುಧಾ' ಜೊತೆ ತಮ್ಮ ಅನಿಸಿಕೆ ಹಂಚಿಕೊಂಡರು.

ಕೃಷಿ ಕುಟುಂಬದಲ್ಲಿಯೇ ಹುಟ್ಟಿ ಬೆಳೆದ ದೇವರಾವ್ 60 ವರ್ಷಗಳಷ್ಟು ದೀರ್ಘಕಾಲದಿಂದ ಕೃಷಿಯಲ್ಲಿ ನಿರತರು. ಬಾಲ್ಯದ ಉತ್ಸಾಹ ಈಗಲೂ ಇದೆ. ಸುಮಾರು 170 ಭತ್ತದ ತಳಿಗಳನ್ನು ಸಂರಕ್ಷಿಸಿರುವ ಅವರ ಬಳಿ ಈ ಸಂರಕ್ಷಣೆಯ ಕೆಲಸಕ್ಕೇನು ಪ್ರೇರಣೆ ಎಂದು ಪ್ರಶ್ನಿಸಿದರೆ, ಮುಗುಳು ನಗುತ್ತಾ, 'ಉಣ್ಣುವ ಅನ್ನವೆಂದರೆ ನನಗೆ ಬಹಳ ಇಷ್ಟ. ಅನ್ನವೇ ಪ್ರಾಣ ಎಂದಮೇಲೆ ಅದನ್ನು ನಾವು ಕಾಪಾಡಿಕೊಂಡು ಬರಬೇಕಾದ್ದು ಧರ್ಮವಲ್ಲವೇ' ಎನ್ನುತ್ತಾರೆ.

'ಪ್ರಕೃತಿಗೆ ಹೊಂದಿಕೊಂಡು ಹೋದರೆ, ಪ್ರಕೃತಿ ಕೊಟ್ಟದ್ದನ್ನು ಸ್ವೀಕರಿಸುವ ವಿನಯವಿದ್ದರೆ ಭತ್ತದ ಕೃಷಿ ಕಷ್ಟವೇನಲ್ಲ. 2019ರಲ್ಲಿ ಭೂಕುಸಿತವಾದಾಗ ನಮಗಿದ್ದ ನೀರಿನ ಆಶ್ರಯವು ತಪ್ಪಿಹೋಯಿತು.



ಪತ್ನಿ ಶಾರದಾ ಜೊತೆ ಬಿ.ಕೆ. ದೇವರಾವ್